

# ಯುದ್ಧದ ನಿರರ್ಥಕತೆಯ ಕಾಣ್ಕೆ

**ಯುದ್ಧ ಎಂಬುದು ಬರೀ ಗುಂಡು ಮದ್ದುಗಳಿಂದಷ್ಟೇ ಅಲ್ಲ, ಅದು ಜನರ ಮನಸಲ್ಲಿ ನಡೆಯುವಂತಹದ್ದು. ಭೌತಿಕವಾಗಿ ನಡೆಯುವ ಯುದ್ಧವನ್ನು ನಿಲ್ಲಿಸಬಹುದು; ಆದರೆ ಆದರ ಮೂಲಬೀಜಗಳಿರುವುದು ಮನುಷ್ಯನ ಮನಸಿನಲ್ಲಿ ಎನ್ನುವುದನ್ನು ಕಾಣಿಸುವ ಕಿರುಚಿತ್ರವಿದು.**

■ ಗೌರಿ

ಸಸ್ಪೆನ್ಸ್ ಮತ್ತು ಹಾರರ್ ಅಂಶಗಳು ನಿರ್ದೇಶಕ ಜೋಷ್ ಟ್ಯಾನರ್‌ನ ಕಿರುಚಿತ್ರಗಳಲ್ಲಿ ಕಾಣುವ ಸಾಮಾನ್ಯ ಅಂಶಗಳು. ಕ್ಷಣ ಕೂಡ ಅತ್ತಿತ್ತ ಗಮನ ಹರಿಯದ ಹಾಗೆ ಚಿತ್ರ ಕಟ್ಟುವ ಅವರು, ಆ ವಿವರಗಳ ಮೂಲಕವೇ ಮನುಷ್ಯನ ಮೂಲಭೂತ ಗುಣಗಳ ಶೋಧನೆಗೂ ಇಳಿಯುತ್ತಾರೆ. ಹಾಗಾಗಿಯೇ ಅವರ ಕಿರುಚಿತ್ರಗಳು ಪೂರ್ಣಪ್ರಮಾಣದ ಚಿತ್ರವನ್ನು ನೋಡಿದ ಅನುಭವವನ್ನೇ ನೀಡುತ್ತವೆ.

‘ದಿ ಲ್ಯಾಂಡಿಂಗ್’ ಕಿರುಚಿತ್ರ ಕೂಡ ಕೋಲ್ಡ್ ವಾರ್‌ನಂಥ ದೊಡ್ಡ ಕ್ಯಾನ್ವಾಸ್‌ನ ಹಿನ್ನೆಲೆಯಲ್ಲಿ ಇಟ್ಟುಕೊಂಡು, ಮನುಷ್ಯ ಮನುಷ್ಯರ ನಡುವೆ ಹಬ್ಬುವ ದ್ವೇಷದ ಬೆಂಕಿಯ ಕಾವನ್ನು ಮುಟ್ಟಿಸುತ್ತದೆ. ಈ ಸಿನಿಮಾ ನಡೆಯುವುದು ಅಮೆರಿಕದ ಒಂದು ಹಳ್ಳಿಯಲ್ಲಿ. ಯುದ್ಧವೆಂಬ ಪರಿಕಲ್ಪನೆಯನ್ನು ಪುಟ್ಟ ಹುಡುಗ ಎಡ್ವರ್ಡ್ ಕಣ್ಣಿನಲ್ಲಿ ಮತ್ತು ಸೈನಿಕನಾಗಬೇಕು ಎಂಬ ತನ್ನ ಮಹದಾಸೆಯನ್ನು ಪೂರೈಸಿಕೊಳ್ಳಲಾಗದೆ ಒದ್ದಾಡುತ್ತಿರುವ ಅವನ ತಂದೆಯ ಕಣ್ಣಿನಲ್ಲಿ ಕಾಣಿಸುವ ಪ್ರಯತ್ನವನ್ನು ಈ ಕಿರುಚಿತ್ರ ಮಾಡುತ್ತದೆ.

ಒಂದು ದಿನ ಇದ್ದಕ್ಕಿದ್ದ ಹಾಗೆಯೇ ದೂರದಾಕಾಶದಲ್ಲಿ ಒಂದು ದೊಡ್ಡ ಸದ್ದು ಮತ್ತು ಬೆಂಕಿ ಕಾಣಿಸಿಕೊಳ್ಳುತ್ತದೆ. ಆ ಬೆಂಕಿಯುಂಡೆ ಬಂದು ಇವರ ಮನೆ ಮುಂದಿನ ಬಯಲಿನಲ್ಲಿಯೇ ಬೀಳುತ್ತದೆ. ಮಗನನ್ನು ಮನೆಯೊಳಗೆ ಬಿಟ್ಟು ಬಯಲಿಗೆ ಹೋಗುವ ಅಪ್ಪ, ಆ ಬೆಂಕಿಯುಂಡೆಯ ಸಮೀಪದಿಂದ ಯಾವುದೋ ಮೂಟೆಯನ್ನು ಎಳೆದುಕೊಂಡು ತಂದು ಶೆಡ್‌ನಲ್ಲಿ ಹಾಕುವುದನ್ನು ಎಡ್ವರ್ಡ್ ನೋಡುತ್ತಾನೆ. ಅವನಿಗೆ ಅದರ ಕುರಿತು ಕುತೂಹಲ, ಆದರೆ ಅಪ್ಪನನ್ನು ಕೇಳಲು ಭಯ. ಕೊನೆಗೊಂದು ರಾತ್ರಿ ಶೆಡ್‌ನೊಳಗೆ ಹೊಕ್ಕು ನೋಡಿದಾಗ ಗಾಬರಿಯಾಗುತ್ತಾನೆ. ಅಲ್ಲೊಬ್ಬ ಮನುಷ್ಯನನ್ನು ಕೈಕಾಲು ಕಟ್ಟಿ ನೆಲಮಾಳಿಗೆಯಲ್ಲಿ ಒಗೆಯಲಾಗಿದೆ. ಅಷ್ಟರಲ್ಲಿ ಅಪ್ಪ ಬರುತ್ತಾನೆ. ಎಡ್ವರ್ಡ್ ಅಡಗಿಕೊಳ್ಳುತ್ತಾನೆ.

ಎಡ್ವರ್ಡ್ ತಂದೆಯ ಪ್ರಕಾರ ಆ ಮನುಷ್ಯ, ಕಮ್ಯುನಿಸ್ಟ್. ಅಮೆರಿಕದ ವೈರಿ. ದಾಳಿ ಮಾಡಲು ಇಲ್ಲಿಗೆ ಬಂದಿದ್ದಾನೆ ಎಂಬುದೇ ಎಣಿಕೆ. ಹಾಗಾಗಿ ಅವನನ್ನು ಕೊಲ್ಲುವುದು ತನ್ನ ಧರ್ಮ ಎಂದು ಬಗೆಯುತ್ತಾನೆ. ಆದರೆ ಪುಟ್ಟ ಬಾಲಕನಿಗೆ ಭಯ. ಎಡ್ವರ್ಡ್‌ನಿಗೆ ಅವನು ನಮ್ಮ ವೈರಿ ಎಂದು ಎಷ್ಟೇ ಹೇಳಿದರೂ ಒಪ್ಪಿಕೊಳ್ಳಲು ಹಿಂಜರಿಕೆ. ನೇಣಿನಲ್ಲಿ ಸಿಲುಕಿ ಉಸಿರುಗಟ್ಟುತ್ತಿರುವ ಅವನನ್ನು ನೋಡಿ ಬಿಕ್ಕಿ ಬಿಕ್ಕಿ ಅಳುತ್ತಾನೆ. ಕೊನೆಗೆ ಎಡ್ವರ್ಡ್ ತಂದೆಗೆ ಟೀವಿ ವಾರ್ತೆಗಳ ಮೂಲಕ, ತಾನು ಕೊಂದ ವ್ಯಕ್ತಿ ಅಂತರಿಕ್ಷಯಾನಿಯಾಗಿದ್ದ ಎಂಬ ಸಂಗತಿ ತಿಳಿದು ಅವನಿಗೆ ಪಶ್ಚಾತ್ತಾಪವಾಗುತ್ತದೆ.

ಎರಡು ಕಾಲಘಟ್ಟದಲ್ಲಿ ಈ ಕಥೆ ನಡೆಯುತ್ತದೆ. ಅರವತ್ತರ ದಶಕದಲ್ಲಿ ನಡೆದ ಈ ಘಟನೆಯನ್ನು ನೆನಪಿಸಿಕೊಂಡು ಆ ಜಾಗಕ್ಕೆ ಬಂದಿರುವ ಎಡ್ವರ್ಡ್‌ಗೆ ಈಗ ವಯಸ್ಸಾಗಿದೆ. ಅವನ ಅಪ್ಪ ಆಗಷ್ಟೇ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾನೆ. ಹೀಗೆ ನಾನ್ ಲೀನಿಯರ್ ತಂತ್ರದಲ್ಲಿಯೇ ಕಟ್ಟಲಾದ ಈ ಕಿರುಚಿತ್ರ, ಸಸ್ಪೆನ್ಸ್ ಕಥೆಯನ್ನು ಹೇಳುತ್ತಲೇ ಯುದ್ಧದ ಹಾಗೂ ದೇಶ ದೇಶಗಳ ಜನರ ಮನಸ್ಸಲ್ಲಿ ದ್ವೇಷ ಹುಟ್ಟುಹಾಕಿದ್ದ ಶೀತಲ ಸಮರದ ಪರಿಣಾಮಗಳನ್ನು ಶೋಧಿಸುತ್ತದೆ. ಹಾಗೆಯೇ ಹೊರಗಿನ ಜಗತ್ತಿನಲ್ಲಿ ನಡೆಯುವ ದೊಡ್ಡ ದೊಡ್ಡ ಹಿಂಸೆಗಳ ಬೀಜ ಮನುಷ್ಯನ ಮನಸ್ಸಿನೊಳಗೇ ಅಡಗಿದೆ ಎಂಬುದರ ಸೂಚನೆಯನ್ನೂ ನೀಡುತ್ತದೆ.



**ಹೆಸರು:** ದ ಲ್ಯಾಂಡಿಂಗ್
**ನಿರ್ದೇಶಕ:** ಜೋಷ್ ಟ್ಯಾನರ್
**ನಿರ್ಮಾಪಕ:** ಜಾಡೆ ವ್ಯಾನ್ ಡೇರ್ ಲೇ
**ಛಾಯಾಗ್ರಹಣ:** ಜಾಸನ್ ಹ್ಯಾಗ್ರೀವ್ಸ್ ಆಕ್ಸ್
**ಸಂಕಲನ:** ಡೆರ್‍ಯಾನ್ ವಾಟ್ಸ್
**ತಾರಾಗಣ:** ಹೆನ್ರಿ ನಿಕ್ಸನ್, ಡೇವಿಡ್ ರೋಬರ್ಟ್ಸ್, ಟಾಮ್ ಉಶೆರ್

ಈ ಕಿರುಚಿತ್ರ ವೀಕ್ಷಣೆಗೆ bit.ly/2R1TiM3 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.